ರಾಗಿಣಿ

ಎಸ್. ವಿ. ಪರಮೇಶ್ವರಭಟ್ಟ, ಎಂ. ಎ.

ಸರಸ ಸಾಹಿತ್ಯ ಪ್ರಕಾಶನ
ಮೈಸೂರು

ಈ ಲೇಖಕರನ್ನು ಕುರಿತು

ಶ್ರೀಯುತ ಎಸ್. ವಿ. ಪರಮೇಶ್ವರಭಟ್ಟ ಎಂ. ಎ., ಅವರು ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರು. ಶ್ರೀಯುತರು ೧೯೩೯ರಲ್ಲಿ ಕನ್ನಡ ಅಧ್ಯಾಪಕರಾಗಿ ಮೈಸೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದರು. ಮುಂದೆ ತುಮಕೂರು, ಶಿವಮೊಗ್ಗ ಇಂಟರ್‌ಮೀಡಿಯೆಟ್ ಕಾಲೇಜುಗಳಲ್ಲಿ ಕೆಲಸ ಮಾಡಿದ ಇವರು ೧೯೫೦ರಲ್ಲಿ ಮೈಸೂರು ಮಹಾರಾಜಾ ಕಾಲೇಜಿಗೆ ವರ್ಗವಾಗಿ ಬಂದರು. ಈಗ ಮೂರು ವರುಷಗಳಿಂದ ಮೈಸೂರಿನ ಮಾನಸ ಗಂಗೋತ್ರಿಯ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿದ್ದಾರೆ.

ಕಳೆದ ಮೂವತ್ತು ವರುಷಗಳಿಂದ ಶ್ರೀಯುತರು ಲೇಖನ ವ್ಯವಸಾಯದಲ್ಲಿ ತೊಡಗಿದ್ದಾರೆ. ಇವರ 'ಕನ್ನಡ ಕಾಳಿದಾಸ ಮಹಾಸಂಪುಟ' ಒಂದು ಉದ್ಗ್ರಕೃತಿ. ಇದರಲ್ಲಿ ಕಾಳಿದಾಸನ ಎಲ್ಲ ಕಾವ್ಯಗಳನ್ನೂ ಮತ್ತು ಎಲ್ಲ ನಾಟಕಗಳನ್ನೂ ಶ್ರೀ ಭಟ್ಟರು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ. ಬಹುಶಃ ಭಾರತದ ಬೇರೆ ಯಾವ ಭಾಷೆಯಲ್ಲಿಯೂ ಹೀಗೆ ಒಬ್ಬನೇ ಕಾಳಿದಾಸನ ಎಲ್ಲ ಕೃತಿಗಳನ್ನೂ ಅನುವಾದ ಮಾಡಿ ತನ್ನ ಮಾತೃಭಾಷೆಗೆ ತಂದಿರುವುದು ದೊರೆಯುವುದಿಲ್ಲ. ಈ ಸಂಪುಟಕ್ಕೆ ಜೊತೆಯಾಗಿ ಇನ್ನೊಂದು ಬೃಹತ್ ಸಂಪುಟವನ್ನು ಜೋಡಿಸಿಕೊಟ್ಟು ಅದರಲ್ಲಿ ಕಾಳಿದಾಸನ ಎಲ್ಲಾ ಕೃತಿಗಳ ಆಮೂಲಾಗ್ರವಾದ ಪರಿಚಯವನ್ನೂ ವಿಮರ್ಶೆಯನ್ನೂ ಒದಗಿಸಿಕೊಡಬೇಕೆಂಬ ದೊಡ್ಡ ಕೆಲಸದಲ್ಲಿ ಶ್ರೀ ಭಟ್ಟರು ಇದೀಗ ತೊಡಗಿದ್ದಾರೆ.

~~[illegible]~~

— శ్రీ [illegible]

— [illegible]

[illegible]

[illegible]

[illegible]

ಸರಸ ಸಾಹಿತ್ಯ ಪ್ರಕಟಣೆ - ೮

ರಾಗಿಣಿ

(ಪ್ರೇಮಗೀತಗಳ ಸಂಕಲನ)

ಎಸ್. ವಿ. ಪರಮೇಶ್ವರಭಟ್ಟ, ಎಂ. ಎ.

ಸರಸ ಸಾಹಿತ್ಯ ಪ್ರಕಾಶನ
ಮೈಸೂರು

ಮೊದಲನೆಯ ಮುದ್ರಣ: ೧೯೪೦
ಎರಡನೆಯ ಮುದ್ರಣ: ೧೯೬೩

ಪ್ರತಿಗಳು ದೊರೆಯುವ ಸ್ಥಳ:
೧೪೯೮/೨೪ 'ಕಲ್ಪನಾ' ರಾಮು ಅಯ್ಯರ್ ರಸ್ತೆ,
ಕೃಷ್ಣಮೂರ್ತಿಪುರಂ, ಮೈಸೂರು - ೪

ಸಾಮಾನ್ಯ ಪ್ರತಿ ಬೆಲೆ: ರೂ. ೧-೮೦
ಕ್ಯಾಲಿಕೋ ಪ್ರತಿ ಬೆಲೆ: ರೂ. ೩-೦೦

ಮುದ್ರಕರು:
ಆರ್. ಎನ್. ಹಬ್ಬು, ಉಷಾ ಪ್ರೆಸ್, ಮೈಸೂರು - I

ರಾಗಿಣಿ

ಪರಿವಿಡಿ

ಮುನ್ನುಡಿ

ನೀನೂದುತಿರುವ ಈ ಸುಳಿದಳಿರೆಲೆಯ ಪೀಪಿ,
ಓ ಮಲೆಯಣುಗದಮ್ಮ, ಮೆಚ್ಚಿನಗೆ, ನಿನಗಾಗಿ
ಮೇಣಾ ಮಲೆಯ ನೆನಹಿಗಾಗಿ, ಚಿಲಿಪಿಲಿಗೈವ
ನೂರುಲಿಯ ಬಣ್ಣಬಣ್ಣದ ಗರಿಯ ಬನವಕ್ಕಿ
ಜೇನಿಂಚರಂಗೈಯುತಿಹವಾದೊಡಂ, ನಿನ್ನ
ತಳಿರ ಸುರುಳಿಯ ಕೊರಳ ಚೀರುಲಿಯೆ ಮೀರುತಿದೆ
ಆ ತುಮುಲ ಗಾನಮಂ, ತನ್ನೆದೆಯ ಹೊಸವುಸಿರ
ಉಲ್ಲಾಸದಿಂ. ಕೇಳಿ ಕಿನಿಸುವುದೆ ಕಾಮಳ್ಳಿ
ಏಂ ಕೀಚು ಕೂಗೆಂದು ? ಮುನಿಯುವುವೆ ಹಿಂಡುಗಿಳಿ
ತಮ್ಮ ರಾಗದ ರಥಕೆ ಬಿರಿಯಿಕ್ಕಿದಂತಾಗಿ ?
ಕಾಜಾಣದಾಲಾಪನೆಯ ಕೊರಳ ಗರಗಸವೆ
ಹಳ್ಳಿ ಹೈದನ ಕೈಯ ಪೀಪಿದನಿ ?—
ಲೆಕ್ಕಿಪನೆ ?
ಪೀಪಿಪೀ ಪೀಪಿಪೀ ಎಂದೆಲೆಯ ಪೀಪಿಯಂ
ಮನದಣಿಯೆ ಊದಿ, ಮಲೆಯಮ್ಮನಿಗೆ ತಾನೂ
ಅಕ್ಕರೆಯ ಮಗುವೆಂಬ ಹಕ್ಕನಾಸ್ವಾದಿಸುತೆ
ನಲಿದು ತೊಳಲುವನುಸಿರು ಸೋಲ್ವನ್ನೆಗಂ !—
ಪೀಪಿ
ಎಂಬಿರಾ ? ಬರಿ ಎಲೆಯ ಸುರುಳಿ ಎಂದೆಂಬಿರಾ ?
ಅದರೊಳಾಡುವುದೇನು ? ಬರಿಗಾಳಿಯಲ್ತುಸಿರು !
ಬಾಳುವೆದೆಯುಸಿರು ! ಜೀವಿಯ ಉಸಿರು ! ಮಾನವನ
ಸಿರಿಯುಸಿರು ! ಉಸಿರ ಲೆಕ್ಕಿಸಿ ಕೆಮ್ಮನಿರು, ಕುಕಿಲ

1

ಕಲಿತಿರುವ ಜಾಣ ಪಂಡಿತವಕ್ಕಿ !—
ನೀನೂದೊ,
ಎಲೆ ಮಲೆಯಣುಗದಮ್ಮ, ಯಾರು ಏನೆಂದರೇನ್ ?
ನಮ್ಮ ಗಾನಕೆ ನಾವೆ ಮೊದಲ ಗುರಿ, ಮುಖ್ಯಗುರಿ,
ತಮ್ಮ. ಅನ್ಯರ ಮೆಚ್ಚನೆಮ್ಮ ನೆಮ್ಮದಿಗೇಕೆ
ಮಳಲ ತಳಹದಿ ಮಾಡಿ ಕುದಿದು ಕೋಟಲೆಗೊಳ್ವ
ಗಾಂಪು ? ಪೀಪಿಯೆ ಮುಂದೆ ವೇಣು ; ವೇಣುವೆ ಮುಂದೆ
ವೀಣೆ ; ಆ ಪದವಿಗಿಂ ಮಿಗಿಲಪ್ಪ ಪದವಿಯುಂ,
ಕೀರ್ತಿಯುಂ, ಪುಣ್ಯಮುಂ, ಶಾಂತಿಯುಂ ಕಾಣೆನಾಂ.
ಸಂಗಿಯಾಗಲಿ ನಿನ್ನ ಪೀಪಿ ಕಾಜಾಣ, ಗಿಳಿ,
ಕಾಮಳ್ಳಿ, ತೇನೆ, ಕೋಗಿಲೆ, ಹೊರಸು, ಪಿಕಳಾರ
ಮೊದಲಪ್ಪ ಪೆಸರಾಂತ ಮತ್ತೆ ಪೆಸರರಿಯದಿಹ
ಮಲೆವಕ್ಕಿಗಳಿಗೆ. ವೇದಿಕೆಯಕ್ಕೆ ನಿನ್ನುಲಿಯು
ಕಲ್ಪನಾಸುಂದರಿಯ ಲಲಿತ ಲಾಸ್ಯದ ಲಯಕೆ
ತುಂಗಭದ್ರಾಸಂಗಿ ನಿತ್ಯಸುಂದರ ನಿಬಿಡ
ವರ್ಣಾರ್ಣವಾರಣ್ಯಮಯ ರುಂದ್ರ ಸಹ್ಯಾದ್ರಿ :
ಯಾರು ಸುಖಿಸಲಿ, ಬಿಡಲಿ ; ಎದೆಯು ಹಿಗ್ಗಿಗೆ ಕೊರಳ
ಉಲಿಯೆ ಹೆಗ್ಗುರುತಾಗಿ ಬುಗ್ಗೆ ಚಿಮ್ಮಲಿ ಇಂಚರಂ !

ಬೆಂಗಳೂರು
೧೭—೧೦—೧೯೪೦

ಕೆ. ವಿ. ಪುಟ್ಟಪ್ಪ

ನಾವು ನಲಿವ

ಜೊನ್ನ ಹೊಳೆ ನೀನಾಗೆ
ಬಾನ ಮೀನು ನಾನಾಗಿ
ನಾವು ನಲಿವ.

ಸೋಗೆ ಗರಿ ನೀನಾಗೆ
ಸೋನೆ ಮುಗಿಲು ನಾನಾಗಿ
ನಾವು ನಲಿವ.

ಬೈಗುಗೆಂಪು ನೀನಾಗೆ
ಕೆಮ್ಮುಗಿಲು ನಾನಾಗಿ
ನಾವು ನಲಿವ.

ಕಂಪಿನೆಸಳು ನೀನಾಗೆ
ದುಂಬಿಕೂಸು ನಾನಾಗಿ
ನಾವು ನಲಿವ.

ಹೂಬಿಸಿಲು ನೀನಾಗೆ
ಹೂಮಳೆ ನಾನಾಗಿ
ನಾವು ನಲಿವ.

ನಾನೊಮ್ಮೆ ಒಲವಾಗಿ
ನೀನೊಮ್ಮೆ ಚೆಲುವಾಗಿ
ನಾವು ನಲಿವ.

ನಾ ನೀನು ಒಂದಾಗಿ
ಆನಂದದೊಲವಾಗಿ
ನಾವು ನಲಿವ.

ರಾಧಾಕೃಷ್ಣ

ಹುಣ್ಣಿಮೆ ಚಂದಿರ ಬಂದಿಹನೆಂದು
ತಿಂಗಳ ಪೂಜೆಯ ಸಲ್ಲಿಸಲೆಂದು
ಬಂದಳು ರಾಧೆಯು ಯಮುನೆಯ ತಡಿಗೆ;
ತೋರಿತು ಹೊಸ ಶೃಂಗಾರದ ನಡಿಗೆ.

ತಿಂಗಳ ಪೂಜಿಸುವಾನಂದದಲಿ
ಮರೆತಿರಲಿಹವನು ತನ್ಮಯತೆಯಲಿ;
ಬೃಂದಾವನದೊಳಗಲೆಯುತ ಬಂದು
ನಂದಕುಮಾರ ವಿನೋದವಿದೆಂದು;

‘ರಾಧೆ’ ಎಂದನು ಉತ್ತರವಿಲ್ಲ,
‘ನೀರೆ’ ಎಂದರು ಮರುಮಾತಿಲ್ಲ.
ಮಾತೇ ಬಾರದು, ನುಡಿಯಳು ರಾಧೆ.
ಕೃಷ್ಣನು ಎದೆಯುಮ್ಮಳದಲಿ ನೊಂದು,

‘ರಾಧೆ’ ಅರ್ಥವಿದೇನೆಂದೆನಲು;
‘ತಿಂಗಳ ಪೂಜೆ’ ಎಂದಳು ರಾಧೆ
ಮುಚ್ಚಿದ ಕಂಗಳನೂ ತೆರೆಯದೆಯೆ
ನುಡಿಸಿದ ಕೃಷ್ಣನ ಮರುನುಡಿಸದೆಯೆ.

“ಏನೆಲೆ ರಾಧೆ ನನ್ನೊಳು ಮುನಿಸೆ?
ನೀನೀತೆರದಲಿ ಮೌನವ ಧರಿಸೆ
ಮನದೊಳಗಳಲುತೆ ಬೇಯುವೆ ನಾನು
ನಿನಗದು ಹಿತವೆ; ತರುವಹುದೇನು?”

ತಿಂಗಳ ಪೂಜೆಗೆ ಕರೆದರು ಬರದ
ಕೃಷ್ಣಗೆ ಶಿಕ್ಷೆ ಇದೇ ಸರಿ ಎಂದು
ನುಡಿಯದೆ ಕುಳಿತಳು ಬಿಂಕದಿ ರಾಧೆ
ನಸುಮುನಿಸಿನ ಹುಸಿ ತನ್ಮಯತೆಯಲಿ.

ಕೃಷ್ಣಗೆ ತಿಳಿಯಿತು ರಾಧೆಯ ಮೌನ,
ಒಮ್ಮೆಗೆ ಕೊಳಲನು ಬದಿಯೊಳಗಿಟ್ಟು
ರಾಧೆಯ ಎದುರೇ ದಿಟ್ಟಿಯ ನೆಟ್ಟು
ಕುಳಿತನು ತಾನೂ ತನ್ಮಯತೆಯಲಿ.

ಪ್ರೇಮವೆ ಮೂರ್ತೀಭವಿಸಿದ ರಾಧೆ,
ಪ್ರೇಮದ ಕಿಂಕರನಾದಾ ಕೃಷ್ಣ.
ಒಲಿಸುವರಾರೊ ಒಲಿಯುವರಾರೊ
ಒಲವಿದೆ ಗೆಲುವಿದೆ ಪ್ರೇಮವಿದೆ.

'ಕೃಷ್ಣಾ' ಎಂದಳು ರಾಧೆಯು ಎದ್ದು.
'ರಾಧೆ' ಎಂದನು ಕೃಷ್ಣನು ಗೆದ್ದು.
ರಾಧಾಕೃಷ್ಣರ ಪ್ರೇಮೋತ್ಸವದಿ
ಬ್ರಹ್ಮಾನಂದದ ದಿವ್ಯನದಿ;

ಹರಿಯಿತು ಉಕ್ಕಿತು ಹರಿಯಿತು ಮುಂದೆ
ರಾಧಾಕೃಷ್ಣರು ನಿಂತರು ಹಿಂದೆ.
ಮೇಲಾಕಾಶದಿ ಚಂದ್ರನು ನಗುತ
ಬೆಳಗಿದ ಲೋಕವ ಪಡುವಲು ಹೊಗುತ.

ಭಾವಗೀತೆ

೧

ಮಲೆಗಳ ನಾಡಿನ ಚೆಲುವಿನ ಬೀಡಿನ
ಕಾಡಿನ ತಪ್ಪಲ ಕಣಿವೆಯಲಿ
ತೆರೆಮೊಗವರಳಿಸಿ ನೊರೆನಗೆ ಸೂಸುತೆ
ನಲಿಯುತೆ ಹರಿಯುವ ತುಂಗೆಯಲಿ
ಸಾಸಿರ ಬಣ್ಣದ ಪಡುವಲ ಮೈಸಿರಿ
ತೆರೆತೆರೆಯಲಿ ಪ್ರತಿಬಿಂಬಿಸಿರೆ
ಕಂಗಳ ನೋಟಕೆ ರಂಜಿಸಿರೆ—

೨

ತುಂಗೆಯ ಮೀಹದಿ ಮುಡಿ ಮಡಿಯಾಗಿಹ
ಆರಿಸಿನ ಬಣ್ಣದ ಮರಳಿನಲಿ
ಸಂಜೆಯ ಗಾಳಿಯು ಬೀಸಲು ಬೀಳುವ
ಹುವ್ವಿನ ಹಾಸುಗೆಯಂಚಿನಲಿ
ಅಂದೆನ್ನಿನಿಯಳ ಕರೆದಾನಂದದಿ
ಪ್ರಕೃತಿಯ ಪ್ರೇಮಕೆ ಎದೆತೆರೆದು
ಕುಳಿತಿರೆ ಅಲ್ಲಿಯೆ ಮೈಮರೆದು—

೩

ಹನಿಹನಿಯೊಸರುವ ಚೆಂಜೇನಿನ ಹೊಸ
ಚಿನ್ನದ ಬಣ್ಣದ ಕೊಡದಂತೆ
ಮೂಡಣಕಡೆಯಿಂದುದಯಿಸೆ ಚಂದ್ರಿಕೆ
ಹೊಳೆಯಲಿ ಹೊನ್ನನು ಸುರಿದಂತೆ

ತಿಂಗಳು ತುಂಬಿತು ತುಂಬಿ ಹಸರಿಸಿ
ಹೊಳೆಯಲಿ ಮರಳಲಿ ತುಳುಕಾಡಿ
ಹರಿಯಿತು ತೊರೆಯೊಂದಿಗೆ ಕೂಡಿ.

೪

ನುಣ್ಣನೆ ತಣ್ಣನೆ ಹುಣ್ಣಿಮೆ ಚಂದಿರ
ಚಂದದಿ ಬಾನಿನೊಳುದಿಸಿ ಬರೆ
ತೆಳ್ಳಗೆ ಮೆಲ್ಲಗೆ ಸುಖವಹ ತೆರದಲಿ
ಕಮ್ಮನೆ ಗಾಳಿಯು ಬೀಸುತಿರೆ
ತಿಂಗಳ ನೋಟವನೊಲಿದುಗ್ಗಡಿಸುವ
ತೆರದಲಿ ತೇನೆಯು ಹಾಡುತಿರೆ
ತುಂಗೆಯ ತೊರೆ ತಲೆದೂಗುತಿರೆ—

೫

ಬಳಿಯೊಳೆ ಇನಿಯಳ ಇನಿದಹ ಕೊಳಲುಲಿ
ನಾದದ ಸವಿಯನು ಹೆಚ್ಚಿಸಿರೆ
ಮನಕಾಹ್ಲಾದವ ಮೇಣಾನಂದವ
ನೀಡುತಲೆನ್ನನು ಮೆಚ್ಚಿಸಿರೆ
ಭಾವಾವೇಶದಿ ಕವಿದೈತರುತಿರೆ
ಕಾವ್ಯೋನ್ಮಾದದ ಪರವಶತೆ
ಅಂದಿರುಳೆನ್ನನೆ ನಾ ಮರೆತೆ!

೬

ಕ್ಷಣಕ್ಷಣಕೇರುವ ಕಲ್ಪನೆ ಹಾರಿತು
ಕನಸನು ಕಟ್ಟಿತು ಮುಗಿಲಿನಲಿ.
ನೆಲಬಾನಂಗಳ ಅಂತರವಳಿಸಿತು
ಬುವಿ ದಿವಿಯಾಯಿತು ನಿಮಿಷದಲಿ.

ಏಕಾಂತತೆಯೊಳು ಆತ್ಮನ ಮೊರೆವೊಲು
ಇನಿಯುಳ ಪ್ರೀತಿಯು ಕರೆ ಕೇಳೆ
ಆಲಿಸುತಲೆ ಮೈ ನವಿರೇಳೆ.

೭

ನೌಕಾಕ್ರೀಡನಕೆಳಸಿದೆವಾಗಲೆ
ತುಂಗೆಯು ಶೀತಲ ವೇಲೆಯುಲೆ !
ನಲಿದೆವು ಒಲಿದೆವು ಆನಂದಿಸಿದೆವು
ರಾಸಕ್ರೀಡೆಯು ಲೀಲೆಯುಲಿ !
ತೊರೆದೆವು ಜಗವನು ಮರೆತೆವು ಇಹವನು
ಮಂಗಳದೊಸಗೆಯು ವೇಳೆಯುಲಿ
ನೌಕಾರೋಹಣ ಕೇಳಿಯುಲಿ.

೮

ಪೂರ್ಣಚಂದ್ರನ ಮರೀಚಿತಾಡನ-
ದಲಿ ತೊನೆದಾಡುವ ಯಾನದಲಿ
ಸನಿಯಂದೊಳಿನಿಯುಳ ಮುರಳಿಯು ವಾದನ-
ದುಲಿಯುನು ಸವಿಯುತೆ ಮೌನದಲಿ
ಆತ್ಮಾನಂದದ ಅಮರತೆ ಪಡೆದೆವು
ಬಂಧುರ ವೇಣುವಿನೋದದಲಿ
ಸಂತತ ನಾದೋನ್ಮಾದದಲಿ !

ಚೆಂಗುಲಾಬಿ

ಏನಿದೇನಿದೇನು ಮಾಟ
ನೋಡಲೆನಿತಿದಚ್ಚರಿ !
ಸೊಬಗೆ ಸೂರೆ ಹೋದ ಬೇಟ
ನೋಡಿದನಿತು ಅಚ್ಚರಿ !

ಅರುಣ ಮೂಡಿದೊಡನೆ ಮೂಡಿ
ಬಿಮ್ಮನೆ ಬಿರಿದರಳಿಹೆ.
ಕಿರಣ ಕಾಂತಿಯೊಡನೆ ಕೂಡಿ
ಕಮ್ಮನೆ ಮಘಮಘಿಸಿಹೆ.

ನೆಲದ ಸಾರ ಸತ್ವ ರಸವೆ
ಹೂವೊಳರಳಿ ನಿಂದುದೆ !
ಒಲುಮೆವೆರೆದ ಚೆಲುವೆ ಬಿರಿದ
ಕೆಂಪು ಕುಸುಮವಾದುದೆ!

ಕಣ್ಣಿಗಿನಿದು ಮುಟ್ಟಲು ಮೃದು
ಅಹಹ ಏಂ ಸುವಾಸನೆ !
ಪುಳಕಗೊಂಡ ಕೆಂಪು ಮೈ
ಮಂದಹಾಸದಾನನೆ !

ದುಂಬಿ ಹಾಡಿ ತಾನೆ ಆಡಿ
ಒಲಿವುದನೆ ಕಾದಿಹೆ.
ಮಧುರ ಮಧುವನೊಲಿದು ನೀಡಿ
ನಲಿವುದನೆ ನೋಂತಿಹೆ.

ಭೃಂಗರಾಜ ಸಂಗ ಸುಖಿಯೆ
ನೀನೆ ಧನ್ಯೆ ಧರೆಯಲಿ!
ಮಧುರ ಹೃದಯೆ ಹಸನ್ಮುಖಿಯೆ
ನಿನ್ನನೆಂತು ಮರೆಯಲಿ!

ಒಂದು ಹಾಡು

‘ ಎಲ್ಲಿಗೆ ಎಲ್ಲಿಗೆ
ಪಯಣವಿದೆಲ್ಲಿಗೆ ’
ಕೇಳಿದಳೆನ್ನನು ಮುದ್ದಿನ ಮಲ್ಲಿಗೆ.
‘ ಅಲ್ಲಿಗೆ ಅಲ್ಲಿಗೆ
ನನ್ನವಳಲ್ಲಿಗೆ
ಹೋಗುವೆನಲ್ಲಿಗೆ ’ ಎಂದೆನು ನಾ ಬಲು ಮೆಲ್ಲಗೆ ಮೆಲ್ಲಗೆ.

‘ ಮಾತಿನ ಜಾಣ
ಎಲ್ಲಿಗೆ ಪಯಣ ’
ಎಂದಳು ಕಣ್ಣನು ಚಿವುಟಿ ಗುಲಾಬಿ,
‘ ಮಾತಿನ ಮಲ್ಲಿ
ಇರುವಳು ಅಲ್ಲಿ
ಹೋಗುವೆನಲ್ಲಿಗೆ’ ಎಂದೆನು ನಾ ಬಲು ಮೆಲ್ಲಗೆ ಮೆಲ್ಲಗೆ.

‘ ಅನುಪಮವಾನಂದ
ಸಂಭ್ರಮವಿದು ಚಂದ’
ಅಣಕಿಸುತೆನ್ನನು ನಕ್ಕಳು ಬಕುಳ
‘ನಗುತಿರು ಬಕುಳ
ಕರೆತಹೆನವಳ
ತಕ್ಕುದಗೈವಳು ಅವಳೆದುರಿಂತು ನಕ್ಕರೆ ನಕ್ಕರೆ’.

‘ ನನ್ನನು ಉಳಿದು
ಹೋಗುವುದಾಗದು’
ಎನ್ನುತ ನಿಲಿಸಿದಳೆನ್ನನು ಚಂಪ.

‘ ಸುಮ್ಮನೆ ಚಂಪಕ
ಕಾಡುವುದೇತಕೆ
ಅವಳೊಡಗೂಡಿ ತ್ವರಿತದಿ ಮರಳಿ ಬರುವೆನು ನಾ ಮರಳಿ’.

ಬಕುಳ ಗುಲಾಬಿ
ಮಲ್ಲಿಗೆ ಚಂಪಕ
ಬೀಳ್ಕೊಡಿರೆನ್ನನು ಹೋಗುವೆನಲ್ಲಿಗೆ.
ಕಾದಿಹಳಲ್ಲಿ
ನನ್ನವಳಲ್ಲಿ
ಹೋಗುವೆನಲ್ಲಿಗೆ ಎಂದೆನು ನಾ ಬಲು ಮೆಲ್ಲಗೆ ಮೆಲ್ಲಗೆ.

ಮಾವಿನ ಮರದಲಿ
ಮೋಹನ ಸ್ವರದಲಿ
ಕೇಳಿಸಿತೊಮ್ಮೆಗೆ ಇನಿದಹ ಪಿಕರುತಿ.
ಆಕಾಶದಲಿ
ಆನಂದದಲಿ
ಮೋಡದ ಹುಡುಗಿಯರೆತ್ತಿದರಾರತಿ ಮುತ್ತಿನ ಆರತಿ.

ದಳದಳ ಕಂಪಿಸಿ
ಸುಮಗಳ ಚುಂಬಿಸಿ
ಬೀಸುತ ಬಂದಿತು ಮಂದಶ್ವಸನ.
ಪರಿಮಳ ಸೂಸಿತು
ಹೃದಯವದರಳಿತು
ಹೊರಟೆನು ನನ್ನವಳಲ್ಲಿಗೆ ನಾ ಬಲು ಮೆಲ್ಲಗೆ ಮೆಲ್ಲಗೆ.

—ಗೆ

ತಂಬೆಲರ ತೀಟದಲಿ ತನಿವಣ್ಣು ತೂಗುತಿರೆ
ಇನಿಗೊರಲೊಳುಲಿಯುತಿಹ ಹಕ್ಕಿ ನಲಿವಂತೆ
ತಾವರೆಯು ಹೂವರಳಿ ಪರಿಮಳವ ಪಸರಿಸಿರೆ
ನೆರೆದುಗುವ ಸಂತಸದಿ ಪರಮೆ ನಲಿವಂತೆ
ನಲಿಯುತಿಹುದೆನ್ನ ಮನ, ಕಾತರಿಪುದೆನ್ನ ಎದೆ
ಇಂದವಳು ಎನ್ನಿನಿಯಳೈತರುವಳೆಂದು.
ಪ್ರೇಮದಾವೇಗದಲಿ ಪೂರ್ಣಪುಳಕಿತಕಾಂತೆ
ತುಂಬಿದೊಲವನು ನೀಡೆ ಬರುವಳೆಂದು.

ಹಾಡು

ನಾವರಿತ ಬಿಂಕದಲಿ ಮೆಚ್ಚು ನಿನಗಾವುದೋ
ಅದನು ಹೇಳೆನ್ನರಸ ಬಿಂಕಗೊಳುವೆ.
ನಾವರಿತ ಗೀತಗಳಲೆಲ್ಲ ನಿನಗಿಂಪಾವು–
ದದನು ಹೇಳೆನ್ನರಸ ಹಾಡಿಯೊಲಿವೆ.
ನಾವರಿತ ಮುತ್ತುಗಳಲೆಲ್ಲ ನಿನಗಿನಿದಾವು–
ದದನು ಹೇಳೆನ್ನರಸ ಮುತ್ತನಿಡುವೆ.

ತೃಪ್ತಿ

ನೂರು ವರುಷಗಳಲ್ಲಿ
ಒಮ್ಮೆ ಸುಳಿದೊಂದಿರುಳ
ಹೊಂಗನಸೆ ಸಾಕು.

ನೂರಾರು ಭೃಂಗಗಳ–
ಲೊಮ್ಮೆ ಸುಳಿದೊಂದಳಿಯ
ಸುಖಸಂಗ ಸಾಕು.

ನೂರು ತಾರಗೆಗಳಲಿ
ನನ್ನ ದಾರಿಯು ಬೆಳಗ–
ಲೊಂದರಿಲೆ ಸಾಕು.

ಸಾಕೊಂದೆ ಕುಡಿಮಿಂಚು,
ಸಾಕೊಂದೆ ಕಡೆನೋಟ,
ಸಾಕೊಂದೆ ಮಾತು.

ನೂರು ಜನುಮಗಳಲ್ಲಿ
ನಿನ್ನ ದರುಶನದೊಂದು
ಕ್ಷಣವೆನಗೆ ಸಾಕು.

ನೀನು—ನಾನು

ಕೆಂಪಿನ ಬಣ್ಣದ ಹೂವನು ನೋಡಿ
ನಲಿದಾಡುವೆ ನೀನು.
ಹಳದಿಯ ಬಣ್ಣದ ಹಣ್ಣೆಲೆ ನೋಡಿ
ಹನಿಗೂಡುವೆ ನಾನು.

ಚಿನ್ನದ ಸುಂದರ ಕನಸಿಗೆ ಸೋತು
ಮರುಳಾಗುವೆ ನೀನು.
ನಿದ್ದೆಯನೋಡಿಸಿದರಿವಿಗೆ ಓತು
ಬೆರಗಾಗುವೆ ನಾನು.

ಹೂನಗೆಯುರಳುವ ಚೆಂದುಟಿ ಕಂಡು
ಮುದ್ದಾಡುವೆ ನೀನು.
ಕಂಬನಿಯುರಳುವ ಕಣ್ಣನು ಕಂಡು
ಮೊಗವಿಳುಹುವೆ ನಾನು.

ಪ್ರೇಮದ ಅಂತರ್ದೃಷ್ಟಿ

ನಿನ್ನ ಮನದಿಂದುಗುವ ಮಧುರ ಮೋಹನಗಾನ—
ಕಿಹುದು ಶೃತಿಯಾಗೆನ್ನ ಜೀವಮಾನ.
ನಿನ್ನ ಗುಣಕಥನವನು ಬಣ್ಣಿಸುವೊಡೆನ್ನೊಳಣಿ—
ಯಾಗಿಹುದು ರಸನೆಯಲಿ ದಿವ್ಯವಾಣಿ.
ನಿನ್ನ ಕಣ್ಣಿನೊಳಿರುವ ಪ್ರೇಮದಂತರ್ದೃಷ್ಟಿ—
ಗಿಹುದೆನ್ನ ಹೃದಯದಲಿ ಅರ್ಥಸೃಷ್ಟಿ.

ಪ್ರೇಮಮಯಿ ನೀನಾದೆ

೧

ಪ್ರೇಮಮಯಿ ನೀನಾದೆ
ಪ್ರಣಯಿ ನಾನಾದೆ
ಸುಧೆಯ ಕೊಡ ನೀನಾದೆ
ನಾನು ಬಾಯಾರಿದೆ !

೨

ನಿನ್ನ ಒಲವಿನೊಳಾನು
ಚಿರ ಬಂದಿಯಾದೆ
ನಿನ್ನ ಸೊಬಗಿನೊಳಾನು
ಇರವಳಿದು ಹೋದೆ !

೩

ಬೇಡ ಬಿಡುಗಡೆ ಅಲ್ಲಿ
ಇರಲಿ ಸೆರೆ ಇಲ್ಲಿ
ಬೇಡ ಹೆರರೊಲವಲ್ಲಿ
ಇರಲು ನೀನಿಲ್ಲಿ !

೪

ಜಗದ ಕಣ್ಣಿನ ಎದುರು
ನಂನಮ್ಮ ಹೆಸರು
ಬೆರೆತು ಜತೆಯಾಗಿರಲಿ
ಮುಂದಗಲದಿರಲಿ !

ನಿನಗಾಗಿ

೧

ಹಗಲುಗಳ ಕಳೆದು ಕತ್ತಲೆಯು ಬದಿಗಿರಿಸಿ
ನಿನ್ನ ಬರುವಿಕೆಗೆಂದೆ ಪಡಿದರೆದು ನಮಿಸಿ
ಮನದ ಬಾನಂಗಳದ ಕಾರ್ಗೊಳೆಯು ತೊಳೆದು
ಸುಮ್ಮನಾಗಿಹೆ ನಾನು ಹರ್ಷವನು ತಳೆದು.

೨

ನಿನಗಾಗಿ ಹೂಗಳನು ಹೆಣೆದ ಹೊಸಹಾರ
ಕಯ್ಯೊಳೇ ಬಾಡುತಿದೆ ಬೇಗನೈತಾರ.
ನಿನಗಾಗಿ ನುಡಿಸುವೀ ವೀಣೆಯುಲಿ ನಡುಗಿ
ಬೈಗಿನೆಲರೊಳು ಕರಗಿ ಹೋಗುತಿಹುದುಡುಗಿ.

೩

ಎಲರಾಗಿ ಸುಳಿಸುಳಿದು ಬೀಸುತ್ತೈತಂದು
ಅಲರಾಗಿ ಘುಮುಘುಮಿಸಿ ಅರಳುತ್ತೈತಂದು
ಎನ್ನೆದೆಗೆ ಪರಿಮಳವ ನೀನೂಡಿದಂದು
ಆದ ದಿವ್ಯಾನಂದವಿಂದಲ್ಲದೆಂದು.

೪

ಪ್ರೀತಿ ತುಂಬಿದ ಹೃದಯಕಿನ್ನೇನು ಬಯಕೆ ?
ದಾಹ ತುಂಬಿದ ಒಡಲಿಗಲ್ತೆ ನೀರಡಿಕೆ ?
ಆಸೆ ದೈವದ ತೂಗು ತೊಟ್ಟಿಲಿರುವಲ್ಲಿ
ಜಾರಿಬಿದ್ದಿತು ಹೃದಯ ಬಲು ಗುಟ್ಟಿನಲ್ಲಿ !

ಕಣಸಿನ ಕಡಲು

೧

ಕಣಸಿನ ಕಡಲಿನೊಳಲೆಗಳು ಕಿಲಕಿಲ
ನಗುನಗುತೆಸೆದಿಹೆವು ;
ಹುಟ್ಟಿನ ತಿವಿತದಿ ನೊಂದೇ ಅರಿಯದ
ತೆರೆದೊಳು ನಗುತಿಹವು.

೨

ಇನ್ನೂ ಅಲೆಗಳ ಸೋಂಕನು ಸವಿಯದ
ನಾವೆಯು ಕಟ್ಟಿಹೆನು ;
ನಾವೆಯ ನಡಸಲು ಕಾಯುತಲಿಹೆ ನಾ-
ನವಳೂ ಬರಲೆಂದು.

೩

ಅವಳೆನಗಿತ್ತಾ ಭಾಷೆಯು ಬಲದಲಿ
ಕಾಯುತಲಿಹೆನಿಲ್ಲಿ ;
ಬರುವಳು ಬರುವಳು ಎನ್ನುವ ಆಸೆಯೆ
ನನ್ನನು ಕಾಯಿಪುದು.

೪

ವಿರಹವೆ ! ನೀನೇ ಬೇರೂರೆನ್ನಲಿ
ಇನ್ನೂ ಬಲವಾಗಿ ;
ಬರುವಿನಿಯಳ ಮನದೊಲವನು ತಣಿಸುವ
ನನ್ನೀ ಒಲವಾಗಿ.

— ಗೆ

ನೀನು ನಾನಾರೆಂದು ತಿಳಿಯಲಿಲ್ಲ
ನಾನು ನೀನಾರೆಂದು ತಿಳಿದೆನಲ್ಲ !

ಸವಿ ಹೃದಯಿ ನೀನೆಂದು ನಾನರಿತೆನಲ್ಲ,
ಕವಿ ಹೃದಯು ನನದೆಂದು ನೀ ತಿಳಿಯಲಿಲ್ಲ
ಗಾನ ನಿನಗಿಷ್ಟವೆಂದಾನರಿತೆನಿಂದು
ನಾನು ಕೊಳಲೂದುವುದ ನೀ ಕೇಳ್ವುದೆಂದು ?

ಮಳೆಯ ಮೋಡಿ

೧

ಬೆಳಗಿನಿಂದ ಸಂಜೆವರೆಗೆ
ಮಳೆಯು ಮೋಡಿ ನೋಡಿದೆನಗೆ;
ಪ್ರಣಯಿ ಜನದ ಮನದ ಜೋಡಿ-
ಯುಪ್ಪುದಿಂಥ ಮಳೆಯ ಮೋಡಿ-
ಗೆನಿಸಿತಂದದೊಮ್ಮೆಗೆ !

೨

ಕ್ಷಣದ ಹಿಂದೆ ಹೂವು ಬಿಸಿಲು !
ಮತ್ತೆ ಕವಿದ ಕರಿಯ ಮುಗಿಲು,
ಆಹ ! ಕ್ಷಣದ ಮಂದಹಾಸ-
ವಳಿಸಿ ಬರುವ ಮುನಿದ ವಿರಸ-
ದಿನಿಯುಳ ನೆನಪಾಯಿತು !

೩

ಮಳೆಯ ಬಿಲ್ಲಿನೇಳು ಬಣ್ಣ
ಬಾಂದಳದಲಿ ಮೂಡಿತಣ್ಣ !
ನೆನಪಾದುದು ; ಮನದನ್ನೆಯ
ಪವಳದುಟಿಯು ಚೆಂಗೆನ್ನೆಯು
ಬಣ್ಣ ಬೆಡಗಿನಾಟವು !

೪

ಮಿಂಚು ಸುಳಿದುದತ್ತಲಿತ್ತ,
ಗುಡುಗು ಕಿವಿಯನಿರಿದುದೆತ್ತ,
ನೆನಪಾಯಿತು ಕಣ್ಣನೋಟ !

ನೆನಪಾಯಿತು ವ್ಯಂಗ್ಯದಾಟ!
ಪ್ರಣಯ ಕುಪಿತೆಯಾರ್ಭಟ;

೫

ಬಿರುಗಾಳಿಯು ಬೀಸುತಿತ್ತು;
ಆಲಿ ಕಲ್ಲು ಸೂಸುತಿತ್ತು;
ಸ್ಮೃತಿಗೆ ಬಂದುದಳುವ ಮುಂದು
ಬಿಸು ಸುಯ್ಲಿನ ಆಳಲೊಳಂದು
ನೊಂದು ನಲ್ಲೆಯತ್ತುದು!

೬

ಗಾಳಿ ಮಿಂಚು ಸಿಡಿಲು ಗುಡುಗು!
ಮುಸಲ ಹತಿಯು ಮಳೆಯ ಪಿಡುಗು.
ಸ್ಮೃತಿಗೆ ಬಂದುದೊಲಿದ ಜೀವ-
ದೆಳೆಯ ಹಲವು ಹುಚ್ಚು ನೋವ—
ನಾಂತನಂತ ಕಾತರ!

೭

ಕಾಲುವೆಯಲಿ ನೀರೋಡಿತು;
ಹೊಲ ಗದ್ದೆಗೆ ಹದವಾಯಿತು.
ಕಾದಲೆಯನು ನೆನೆದೆನು ನಾ;
ಬಂದಂತೆಯೆ ದುಗುಡವು ತಾ-
ನಳಿದ ನಲ್ಮೆ ನೋಟವ!

೮

ಆಹ! ಹೊಯ್ದುದು ತಣ್ಣನೆ ಮಳೆ;
ಹಸುರಾದುದು ನಾಂದಿರುವಿಳೆ.

ಸತಿಯಳಲನು ತೂರಾಡಿಸಿ;
ಅನುರಾಗವನುಕ್ಕೇರಿಸಿ—
ದೊಲುಮೆ ಬೇಟ ಹೊಳೆದುದು!

೯

ಮಳೆಯು ನಿಂತು ಬಿಸಿಲು ಬರಲು,
ಹನಿ ಮಿನುಗಿತು ಬಜ್ಜರದೊಲು.
ಮಣ್ಣ ಬದುಕು-ಮನಕೆನಿಸಿತು
ಒಲುಮೆಯಿಂದ ಹೊನ್ನಾಯಿತು
ಒಲಿದ ಬಾಳು ಸಾರ್ಥಕ!

ಬೈಗಿನ ನಸುಗತ್ತಲೆ ಹೊತ್ತು

ಬೈಗಿನ ನಸುಗತ್ತಲೆ ಹೊತ್ತು
ಬಾನಿಂದಿಳಿದಿತ್ತು.
ಇಳಿದಿಳೆಯನ್ನಾವರಿಸಿತ್ತು
ನೀರವವಾಗಿತ್ತು.
ತುಂಗೆಯು ಮೆಲ್ಲಗೆ ಜಾರಿತ್ತು
ತಂಬೆಲರಲೆದಿತ್ತು.
ತಿರೆ ಚಿರಶಾಂತಿಯೊಳೊರಗಿತ್ತು
ಕತ್ತಲಾಗಿತ್ತು.

ಬಂದಳು ಅರಸಿಯು ಅರಸುತ್ತ
ಅರಸನ ಕರೆಯುತ್ತ.
ಜಡದ ಸುಷುಪ್ತಿಯನಿರಿಯುತ್ತ
ತನ್ನನೆ ಮರೆಯುತ್ತ.
‘ ನಿನ್ನನೆ ಅಭಿವಂದಿಸಲೆಂದು
ನಿದ್ದೆಯನುಳಿದಿಂದು
ಕಾದಿಹುದೆನ್ನಯ ಬಗೆ ಹಕ್ಕಿ
ಬಾ ಬಾ ನಳಿನಾಕ್ಷಿ ! ’

ಈ ನುಡಿ ಅರಸನದಾಗಿತ್ತು
ಅರಸಿಗೆ ಕೇಳಿತ್ತು.
ಚಂದ್ರಿಕೆಯಾಗಲೆ ಉದಿಸಿತ್ತು
ಹಕ್ಕಿ ಹಾಡಿತ್ತು.

ನಗುಮೊಗ ತೋರಮ್ಮ

ನಗುಮೊಗ ತೋರಮ್ಮ
ನಗುವುದ ಕಲಿಯಮ್ಮ || ಪ ||

ಉದಯಭಾನುವ ಕಂಡು
ಕಮಲಿನಿ ಕಣ್ತೆರೆದು
  ನಗುವುದ ನೀ ಕಂಡು
ನಗುಮೊಗ ತೋರಮ್ಮ
ನಗುವುದ ಕಲಿಯಮ್ಮ.

ದುಂಬಿ ಬರುವುದ ಕಂಡು
ಹೂ ಮೊಗವನರಳಿಸಿ
  ನಗುವುದ ನೀ ಕಂಡು
ನಗುಮೊಗ ತೋರಮ್ಮ
ನಗುವುದ ಕಲಿಯಮ್ಮ.

ಬೆಳುದಿಂಗಳನು ಕಂಡು
ತುಂಗೆ ತೆರೆಯುಬ್ಬಿಸಿ
  ನಗುವುದ ನೀ ಕಂಡು
ನಗುಮೊಗ ತೋರಮ್ಮ
ನಗುವುದ ಕಲಿಯಮ್ಮ.

ನಿನ್ನೆಳೆಯ ಕೆಳದಿಯರು
ನಿನ್ನೋರಗಿತ್ತಿಯರು
  ನಗುವುದ ನೀ ಕಂಡು

ನಗುಮೊಗ ತೋರಮ್ಮ
ನಗುವುದ ಕಲಿಯಮ್ಮ,

ನಿನ್ನಕ್ಕ ತಂಗಿಯರು
ನಿನ್ನಣ್ಣ ತಮ್ಮದಿರು
  ನಗುವುದ ನೀ ಕಂಡು
ನಗುಮೊಗ ತೋರಮ್ಮ
ನಗುವುದ ಕಲಿಯಮ್ಮ,

ಇನಿತುಸೊಗವಿರುವಂದು

ಇನಿತುಸೊಗವಿರುವಂದು ಕಳೆದ ಕಾಲದ ದಿನವ
ಮನದೊಳೇತಕೆ ತರುವೆ, ನೊಂದುಕೊಳುವೆ ॥ ಪ ॥

೧

ತಂಬೆಲರು ಸುಳಿಯುತಿರೆ ರಂಬೆಗಳಲುಲಿಯುತಿದೆ
ಕೊಂಬೆಯಲಿ ಹಾಡುತಿದೆ ಸಣ್ಣಹಕ್ಕಿ.
ಇಳಿವ ದಿನಪನ ಕಡೆಯ ಕಿರಣಗಳ ಮಿರುಗಿಸುತೆ
ಗುಳಗುಳನೆ ಹರಿಯುತಿದೆ ತುಂಗೆ ತೊರೆಯು.

೨

ಭಾನುದೇವನು ಬೀರಿದೋಕುಳಿಯೊಳಿದೊ ಮಿಂದು
ಮೌನದಲಿ ನಿಂದಿಹವು ತರುಲತೆಗಳು.
ಹೊಂಬೆಳಗು ಕೆಂಬೆಳಗು ಹೊಳೆವ ಬಣ್ಣದಿ ಕರಗಿ
ತುಂಬಿ ಚೆಲ್ಲಿಹುದಿಲ್ಲಿ ಸಂಜೆಯೊಲವ.

೩

ಪಯಿರುಗಳ ಕೊಯಿಲುದೆನೆಗಳ ತೂಗಿ ತೊನೆತೊನೆದು
ಬಯಲಿನೆಳೆಗರಿಕೆಗಳ ಕುಡಿಯಾಡಿಸಿ
ತಳಿರ ಮರೆಯಲಿ ನಿಂದ ಅರಳುಪರಿಮಳವೆರಸಿ
ಹೊಲದಿಂದ ಮಲೆಯಿಂದ ಬೀಸುತಿಹುದೆಲರು.

ಒಲವು

ಒಂದು ಮಳೆಯೊಂದು ಬಿಸಿಲೊಂದಾಗಿ ದಿನವೊಂದು
ಹೊಂದಿಕೊಳುವಂದದಲಿ ಕಾದಿಗೆಯಲಿ;
ಸವಿಗನಸಿನೊಂದು ನಗೆಗೊಂದು ನಿಡಿದುಸಿರಿನಳು
ಬೆರೆತೊಲವು ಹೊಂದುವುದು ಕಾದಲರಲಿ.

ಹಳೆಯ ಗೀತ

ಯಾವ ಚಿಕ್ಕ ಹಳೆಯ ಗೀತ
ವಾದರೇನು ಆದನೆ ಹೇಳು
    ಕೇಳಿ ನಲಿಯುವೆ.
ಕಳೆದ ಸುಖವೊ ಬರುವ ಸುಖವೊ
ಹಳೆಯ ನನ್ನ ಗೆಳೆಯರನ್ನು
    ನೋಡುವಾಸೆ ಸುಖಗಳೊ !
ಕಂಡುದನ್ನು ನೆನೆವ ಸುಖವೊ
ಕಾಣದುದನು ಕಾಂಬ ಸುಖವೊ !
    ಕಂಡು ನಲಿವ ಸುಖಗಳೊ !
ಯಾವ ಚಿಕ್ಕ ಹಳೆಯಗೀತ–
ವಾದರೇನು ಆದನೆ ಹೇಳು
    ಕೇಳಿ ನಲಿಯುವೆ.

ಹಳೆಯ ವೀಣೆಯಾದರೇನು
ಶ್ರುತಿಗೆ ಹೊಂದಿದಂತೆ ಮಧುರ
    ನುಡಿಯ ನುಡಿಸೆ ಸಾಲದೆ !
ರಾಗರಸಗಳೊರತೆ ಮೂಡಿ
    ಹೃದಯದನುಭವಗಳ ಹಾಡಿ
    ಕೇಳಲಾತ್ಮ ನಲಿಯದೆ ?
ಯಾವ ಚಿಕ್ಕ ಹಳೆಯ ಗೀತ
ವಾದರೇನು ಆದನೆ ಹೇಳು
    ಕೇಳಿ ನಲಿಯುವೆ.

ಇರವು–ಅಳಿವು

ಒಂದು ಮುಂಜಾನೆಯೋ ಒಂದು ಸಂಜೆಗೆ ಹಾದಿ
ಒಂದು ಹೊಳೆವೆಳೆವಿಸಿಲೆ ಒಂದು ಸೋನೆಗೆ ಆದಿ
ಒಂದು ಸೊಬಗಿನ ಇರವೆ ಒಂದು ಶೂನ್ಯದ ಅರಿವು
ಒಂದರಿರವಿನೊಳಿಹುದು ಒಂದರಳಿವು.

ಒಂದು ಕನಸಿನ ಆದಿಯೊಂದು ತಿಳಿವಿಗೆ ಹಾದಿ
ಒಂದು ನೆನಸಿನ ಮೂಲವೊಂದು ವಿರಹದ ಶೂಲ
ಒಂದು ಭಾಗ್ಯದ ದಿನವೆ ತಿರಿವ ದಿನದೊಂದರಿವು
ಒಂದರಿರವಿನೊಳಿಹುದು ಒಂದರಳಿವು,

ಒಂದು ಮಾತು

ನಿನ್ನ ಚಿನ್ನ ಮೂಸೆಯೊಳಗೆ
ಕುದಿಯುತಿರಲಿ ಕರಗುತಿರಲಿ.
ನಿಗಿನಿಗಿಸುವ ಕೆಂಡದುರಿಗೆ
ಮಿಡುಕಬೇಡ ದುಡುಕಬೇಡ.
ಚಿನ್ನ ಕಾವಿನುರಿಗೆ ಕರಗಿ
ತನ್ನ ಕಾಳಿಕೆಯನು ನೀಗಿ
ಮಿರುಮಿರುಗುತಲೆಸೆವುದು.

ಲೋಕವೊಂದು ಹಿರಿಯ ಮೂಸೆ
ದುಃಖವೊಂದು ಸುಡುವ ಬೆಂಕಿ
ಅದರೊಳಿರುವ ನಿನ್ನ ಬಾಳು
ಕೊಳೆಯುರುಹಿದ ಸತ್ವವಹುದು.
ಅದರಿನಂತೆ ಏಕೆ ಚಿಂತೆ ?
ಸಹನಶೀಲಳೆನಿಸುತೆ
ಬಾಳು ಚಿನ್ನವಾಗುತೆ.

ಒಸಗೆ

ಒಂದು ಕಾಲವು ಬರಲು ನವಿಲು ನಾಟ್ಯಂಗೈವು-
ದೊಂದು ಕಾಲವು ಬರಲು ಪಿಕವು ನಲಿಯುವುದು.
ಒಂದು ಕಾಲವು ಬರಲು ಇಮ್ಮಾವು ಫಲ ಬಿಡುವು-
ದೊಂದು ಕಾಲವು ಬರಲು ಪಲಸು ಪಣ್ಣಹುದು.

ಒಂದು ಕಾಲವು ಬರಲು ಕೇದಗೆಯು ಹೊಡೆ ಬಿರಿವು-
ದೊಂದು ಕಾಲವು ಬರಲು ಮೊಲ್ಲೆ ಹೂವಹುದು.
ಒಂದು ಕಾಲವು ಬರಲು ಜಡಿಮಳೆಯು ಸುರಿಯುವುದು.
ಒಂದು ಕಾಲವು ಬರಲು ಬಿಸಿಲು ಕಾಯುವುದು.

ಒಂದು ಕಾಲವು ಬರಲು ಬೆಳುದಿಂಗಳಿಂಬಹುದು
ಬೇರೊಂದು ಕಾಲದಲಿ ಅದೆ ಅಹಿತವಹುದು.
ಒಂದು ಕಾಲವು ಬರಲು ತೆಂಗಾಳಿ ಸುಖವಹುದು.
ಬೇರೊಂದು ಕಾಲದಲಿ ಅದೆ ದುಃಖವಹುದು.

ಒಂದು ಕಾಲವು ಬರಲು ಕೆಳೆಯೊಲುಮೆ ಸೊಂಪಹುದು
ಬೇರೊಂದು ಕಾಲದಲಿ ಅದುವೆ ಹಗೆಯಹುದು.
ಒಂದು ಕಾಲವು ಬರಲು ಅಗಲಿಕೆಯೆ ಸೊಗವಹುದು
ಬೇರೊಂದು ಕಾಲದಲಿ ಮಿಲನ ಚೆನ್ನಹುದು.

ಒಂದೊಂದು ಕಾಲದಲಿ ಒಂದೊಂದು ರೀತಿಯಲಿ
ಒಂದೊಂದು ಸುಖವಹುದು ದುಃಖವಹುದು,
ಅದರದರ ಕಾಲದಲಿ ಸುಖದುಃಖಗಳ ಸವಿದು
ಬಾಳ ಹಸನಾಗಿಪುದೆ ಸೃಷ್ಟಿಯೊಸಗೆ.

ನೆನೆಯದಿರು

ಅಂದಂದಿಗೆ ಸಂದುಹೋದ
ಹಿಂದಿನದನು ಸ್ಮರಿಸಿಕೊಂಡು
ಎಂದೆಂದಿಗು ಮುಂದೆ ಅದನೆ
    ನೆನೆದದೇಕೆ ಕೊರಗುವೆ,
ಅಂದಿನ ದಿವಸಕದುವೆ ಚೆಲುವು
ಇಂದಿನ ದಿವಸಕಿದುವೆ ಚೆಲುವು
ಇದುವೆ ಗೆಲವು ಇದುವೆ ಒಲವು
    ಇದೇ ಇರಲಿ ಎನ್ನುವೆ.

ಹಿಂದೆ ಸಂದುದೇನೆ ಸಲಲಿ
ಮುಂದೆ ಬರುವುದೇನೆ ಬರಲಿ
ಇಂದಿನದೆನಗೆ ಇದೇ ಚೆನ್ನ
    ಇದನೆ ಕೂಡಿ ಸವಿಯುವೆ,
ದಿವಾರಾತ್ರಿ ಉರುಳುತಿರಲಿ
ವರ್ಷವರ್ಷ ಕಳೆಯುತಿರಲಿ
ನೋವೊ ನಲಿವೊ ಯಾವುದಿರಲಿ
    ಅದನೆ ಒಲಿಸಲೆಳಸುವೆ.

ಕೈಯಬಿಟ್ಟು ಹೋಯ್ತು ಕೆಲವು
ಕೈಗೆ ಎಟುಕದಿಹವು ಹಲವು
ಇದ್ದೂ ಇಲ್ಲದಂತೆ ಇಹವು.
    ಆದರದಕೆ ಚಿಂತೆಯೆ.

ಎಷ್ಟು ಸಿಕ್ಕರಷ್ಟೆ ಕಡೆಗೆ
ಪಡೆದಷ್ಟಕೆ ತೃಪ್ತಿಯಾಗೆ
ಇದೇ ಈಪ್ಸಿತಾರ್ಥವೆನುವೆ
ಮತ್ತೆ ಎಂದಿನಂತೆಯೆ.

ಕಲ್ಪನಾ ವಿಲಾಸ

ಪಡುವೆಟ್ಟಿನಾಚೆಯಲಿ ಹಗಲ ಕಡೆಗಾಲದಲಿ
ಸಂಧ್ಯೆ ಸಾಗರದಂತೆ ಮೊರೆದುರುಳುತಿತ್ತು.
ಕದರಿದೋಕುಳಿಯಾಗಿ ಹರಿದ ಬಾಂದೊರೆ ಬಂದು
ಬಣ್ಣಗಡಲನು ನಡುವೆ ಸಂಧಿಸಿತ್ತು.
ಭರ ಬಂದ ಕಡಲಂತೆ ಕಿರಿಮುಗಿಲ ತೆರೆಯೆದ್ದು
ಥಳಥಳನೆ ಹೊಳೆದು ಹೊಗರೇಳುತಿತ್ತು.
ತೆರೆಮರೆಯೊಳತಿದೂರದಾಚೆಯಲಿ ಹೊಳೆದಿತ್ತು
ಕಡಲ ಕಂಬದ ದೀಪದಂತೆ ರವಿಬಿಂಬ.

ಸಿಂಧೂರ ಸಾಗರದ ಚಕ್ರವರ್ತಿನಿಯಂತೆ
ಮೆರೆವ ಸಂಧ್ಯಾದೇವಿ ತನ್ನ ಸಖಿ ಕಳುಹಿ,
ಮುನ್ನೀರಿನಾಟದಲಿ ಮನವಾರೆ ನಲಿಯಲಿಕೆ
ತನ್ನೊಡನೆ ಬರಲೆನ್ನ ಕರೆದಳಂದು.
ಪಡುಗಡಲ ಕೆಂದೊರೆಯು ಮುಗಿಲ ದೋಣಿಯನೇರಿ
ಸಂಧ್ಯೆಗಭಿಮುಖವಾಗಿ ಹುಟ್ಟು ತೆಗೆದು,
ಅವಳ ಸಾನ್ನಿಧ್ಯವನು ಸೇರುವಾತುರದಿಂದೆ
ದೋಣಿಯನು ದೂಡಿದೆನು ಕಡಲ ಮೇಲೆ,
ಪುಟ್ಟ ಚಿನ್ನದ ದೋಣಿ ಅದಕೆ ರನ್ನದ ಹುಟ್ಟು
ಮೇಲೆ ಮುತ್ತಿನ ಛತ್ರಿ ಮಿನುಗುತಿತ್ತು.
ಹೊಂಬೆಳಗು ಕೆಂಬೆಳಗು ಮಿಶ್ರವರ್ಣದಿ ಕರಗಿ
ಸುತ್ತೆತ್ತ ಸಂಭ್ರಮವ ಸೂಸುತಿತ್ತು.
ತೆರೆಯುಬ್ಬಿ ಬರುತಿರುವ ಕಡಲ ಮೇಲಿಂದುರುಳಿ

ಸುರಭಿಯುತ ತಂಬೆಲರು ತೀಡುತಿತ್ತು.
ಮೋಡಗಳ ಹುಡುಗಿಯರು ಹಾಡುಗಳ ಹಾಡಿದರು
ಪ್ರಸ್ಥಾನ ಕಾಲದಲಿ ಶುಭವ ಬಯಸಿ.
ಕಡಲ ಕನ್ಯೆಯರೆಲ್ಲ ಸಂತಸದೊಳಿದಿರು ಬಂ—
ದಾರತಿಯನೆತ್ತಿದರು ಸೇಸೆ ತಳಿದು.
ಕೇಣಿಗೊಂಡೇಳುತಿಹ ತೆರೆಯ ತೂಗುಯ್ಯಲೆಯೊ—
ಳೊಲಿದಾಡಿ ತೂಗಾಡಿ ದೋಣಿ ಸಾಗಿತ್ತು.
ಅವಳೂರ ಸೇರಿದೆನು ಅವಳೊಲವ ಹಾರಿದೆನು
ಅವಳ ಬಳಿ ನನಗಾವುದಿನ್ನು ಕೊರತೆ,
ಗಂಧರ್ವಗಾನ ಯಕ್ಷರ ಕುಣಿತ ಅಪ್ಸರೆಯ—
ರಾಲಾಪ ಕಿನ್ನರರ ತಾಳಮೇಳ,
ರಾಗಮಾಲಿಕೆಗಳನು ನುಡಿವ ರಾಗಿಣಿ ರಾಣಿ
ಅವಳೆದುರೆ ಕುಳಿತಿರುವಳದೊ ಮಧುರ ವಾಣಿ.
ಅವಳ ಸುತ್ತಲು ನಿಂದ ಪರಿವಾರ ದೇವಿಯರು
ರಾಣಿಯಲಸಿಕೆಗಳನು ಪರಿಹರಿಸುವವರು,
ಚೌರಿ ಕನ್ನಡಿ ಕಳಶ ಬಾಚಣಿಗೆ ಹಿಡಿದವರು
ಗಂಧ ಕಸ್ತೂರಿಗಳ ತಿಲಕವಿಡುವವರು,
ಕುಸುಮ ಹಾರವ ಹಿಡಿದ ನಿಡುಜಡೆಯ ನಾರಿಯರು
ಗೆಜ್ಜೆ ಘಲಿರೆನುತಿರುವ ಸೆಜ್ಜೆವನೆಯುವರು,
ಇಂದ್ರನಮರಾವತಿಯ ಸೈರಂಧ್ರಿಣಿಯರಂತೆ
ಸಾಲುಗೊಂಡೆದುರಿನಲಿ ನಿಂತ ರಮಣಿಯರು.
ಮುಗುಳು ನಗೆಯವರ ಬಗೆ ಚಿರ ವಿನೂತನವಾಗೆ
ಅವರಾಟ ಪಾಟಗಳಿಗಂದು ಬೆರಗಾಗೆ;
ರಾಣಿಯರು ಚೇಟಿಯರು ಕೆಳದಿಯರು ಎಲ್ಲರೂ
ಸಂಧ್ಯೆಯೊಬ್ಬಳನುಳಿದು ಮಾಯವಾಗೆ;
ಸಂಧ್ಯೆ ಸಡಗರದಿಂದಲೆನ್ನ ತುಟಿಗಳಿಗಂದು
ಸಂಧಿಸಿದ ನಿಶೆ ತುಂಬಿದಾ ಮಧುರ ಪಾತ್ರೆ

ಸುಧೆಯುಣಿಸನೂಡುತಿರೆ ಮೈಮನವ ಮರೆಯಿಸಿರೆ
ಲೀಲೆಯಲಿ ಕಳೆದಿತ್ತು ಯಾನ ಯಾತ್ರೆ.
ಮೈಮರೆತು ಮನಮರೆತು ಮತ್ತೇರಿ ಮಲಗಿರಲು
ಸಂಧ್ಯೆ ಜಾರಿದಳಯ್ಯೊ ಜಾರಿಣಿಯ ತೆರದಿ.
ಮುಂದೊಮ್ಮೆ ಕಣ್ದೆರೆದು ನೋಡಿದೆನು ಬೆದರಿದೆನು
ದೋಣಿ ಬಾದಣಗೊರೆದು ನೀರು ತುಂಬಿತ್ತು.
ಎಲ್ಲಿ ರನ್ನದ ಹುಟ್ಟು ಎಲ್ಲಿ ಮುತ್ತಿನ ಛತ್ರಿ
ಕಡೆಗಿನಿತು ಕಹಿಯಾಯ್ತೆ ಸಂಜೆ ಮುತ್ತು?
ಹುಚ್ಚೆದ್ದ ಬಿರುಗಾಳಿ ಭೋರಿಡುವ ತೆರೆಯೋಳಿ
ಕಣ್ಣು ಕಾಣದ ಮಹಾಕಾಳರಾತ್ರಿ.
ಗತಿಯಾರು ಮತಿಯಾರಪಾರವಾರಿಧಿಯಿಂದ—
ಲಾರೆನ್ನ ಉಳುಹುವರು ಎಲ್ಲಿ ಧಾತ್ರಿ!
ಎಳಗೂಸಿನಂದದಲಿ ಕೂಗಿ ಕಿಟ್ಟನೆ ಕಿರಚಿ
ಕಾರಿರುಳ ಕಡಲಿನಲಿ ಬೀಳಬೇಕೆ!
ಮುಳುಗಿದೆನೊ ತೇಲಿದೆನೊ ನನಗೆ ಎಚ್ಚರವಿಲ್ಲ
ಮುಂದಾದುದನು ನಿಮಗೆ ಹೇಳಲೇಕೆ?

ಇರುಳೆಲ್ಲ ನನಗಾಗಿ ಕಾದು ಕೃಶಳಾಗಿದ್ದ
ಚಂದಿರೆಯ ಮಡಲಿನಲಿ ನಾನು ಮಲಗಿದ್ದೆ.
ಕ್ಷಮಿಸೆನ್ನ ಶಶಿದೇವಿ ನಿರಪರಾಧಿಯು ನಾನು
ಇನ್ನೊಮ್ಮೆ ಮರುಳಾಗೆ ಸಂಧ್ಯೆಗೆನುತಿದ್ದೆ.
ನನ್ನ ಬಾಳಿನ ಗೃಹಿಣಿ ಮಿಡಿದ ಕಣ್ಣೀರಿನಲಿ
ನನ್ನ ಭಾಗ್ಯೋದಯದ ಉಷೆ ಮಿಂದು ಬಂದು,
ತರುಣಾರುಣೋದಯದ ಮುಂಬೆಳಗಿನೋಲಗದೊ—
ಳಾರತಿಯ ಬೆಳಗಿದಳು ಸೇಸೆ ತಳಿದು,

ರಾಗಿಣಿ

ರತ್ನಗಂಬಳಿ ಮೇಲೆ ರಮಣಿ ವೀಣೆಯ ಹಿಡಿದು
ನಿಲುವುಗನ್ನಡಿ ಮುಂದೆ ಕುಳಿತು ಚೆಲುವೆ;
ಜೇನಹನಿಯೆಂಬಂತೆ ಜಿನುಗಿ ಬರುವಿಂಚರದೊ–
ಳೊಲವ ಮಿಡಿದಾಡಿದಳು ಮೋಹದಿಂದೆ.

ಮೋಡಗಳ ಮರೆಯಿಂದಲಿಣುಕಿದನು ಚಂದಿರನು
ಹಾಡುವವಳಿವಳಾರೊ ನೋಡಲೆಂದು.
ಹತ್ತುದಿಕ್ಕಿನ ತಾರೆ ಬಂದಲ್ಲಿ ಕಿಟಕಿಯಲಿ
ಮೂಡಿದವು ಗಾನವನು ಕೇಳಲೆಂದು.

ರಮಣಿ ಹಾಡುವಳೆಂದೆ ಒಲವಿನಾನಂದದಲಿ
ತೊನೆದು ತೂಗಾಡಿತಂಗಳದ ಹೊಂಗೆ.
ಕೆಮ್ಮನಿದ್ದಿತು ಬಳ್ಳಿ, ಸುಮ್ಮನಿದ್ದಿತು ತೇನೆ;
ಹರಿವುದನೆ ನಿಲ್ಲಿಸಿದಳಂದು ತುಂಗೆ.

ಆಕೆ ಹಾಡಿದಳೆಂದು ಬೇರೆ ಹೇಳುವುದೇಕೆ?
ರಾಗ ಸಿಂಚಿತೆಯಾದಳಂದು ರಜನಿ.
ಆದರಿನ್ನೂ ಬಾರನೇಕೆತಡಮಾಡುವನೊ
ಆವಳಿಂಪಿಗೆ ಸೋತು ಸಿಲುಕಿರುವನೊ !

ಚಪಲ ಮರುತನ ಚೇಷ್ಟೆಗುರಿವ ಚಿನ್ನದ ದೀಪ
ಕಂಪಿಸುತ ಕೆಂಪಾಗಿ ಕೆರಳುತಿತ್ತು !
ಅಯ್ಯೊ ! ಹಣ್ಣಿಂದದನು ಭ್ರಮಿಸಿ ಕಣೆ ದುರಿನಲೆ
ಗರಿಯ ಸುಟ್ಟು ಪತಂಗವುರುಳುತಿತ್ತು.

ನಲ್ಲೆ ಜಡೆಯಲಿ ಮುಡಿದ ಮೊಲ್ಲೆಮಲ್ಲಿಗೆಗಂಪು
ದೂರ ಗಾಳಿಯಲೆಲ್ಲೊ ಕರಗಿಹೋಯ್ತು.
ಅಲ್ಲೆ ಧೂಪಾರತಿಯ ಸುರುಳಿಹೊಗೆ ಸುಳಿಸುಳಿದು
ಬಾರದಿನಿಯನನರಸಿ ಮಾಯವಾಯ್ತು.

ಹೂಜಿಯೊಳಗಿರಿಸಿರುವ ರೋಜ ಬಾಡುತ ಬಂತು
ಬೆಳ್ಳಿಬಟ್ಟಲ ಹಾಲು ಕೆನೆಗಟ್ಟಿತು.
ಬಾರನಾದರು ರಮಣನೆಂತುಳಿವುದೀಹರಣ?
ಕಾಮಿನಿಯ ಕಾತರತೆ ಕೊನೆಮುಟ್ಟಿತು.

ತೆರೆದ ಜಾಲಂಧ್ರದಲಿ ದೂರ ನೀಲಿಯ ಬಾನು
ಗುಂಡಾಗಿ ಕಾಣಿಸಿತು ಸೊನ್ನೆಯಂತೆ.
ಮತ್ತಕಾಶಿನಿ ರಮಣಿಗುತ್ತರವನೀವಂತೆ
ಕಡೆಗೆ 'ಪ್ರೇಮವು ಶೂನ್ಯ'ವೆನ್ನುವಂತೆ.

ದೀಪ ಹಚ್ಚಾ !

ಪ್ರೀತಿಯು ಕರೆಕೇಳಿ ಆತ್ಮನ ಮೊರೆಕೇಳಿ
ನೀ ಬಂದು ನಿಂದಿಲ್ಲಿ
ದೀಪ ಹಚ್ಚಾ.

ನಲ್ಲ ನೀ ಬಂದಂದು ಕಣ್ಣಾರೆ ಕಂಡಂದು
ಮನೆಯೆಲ್ಲ ಹೊಳೆದಂತೆ
ದೀಪ ಹಚ್ಚಾ,

ಬಾಳ ಮುಂಬೆಳಗುರಿದು ಹಗರಣದ ಬೈಗಿಳಿದು
ಕಪ್ಪೇರಿ ಬಂದಿತು
ದೀಪ ಹಚ್ಚಾ.

ಕರಿಗೆಜ್ಜೆ ಕುಣಿಸುತ್ತ ಕಣ್ಣೀರ ಮಿಡಿಯುತ್ತ
ಇರುಳಾಕೆ ಬಂದಳು
ದೀಪ ಹಚ್ಚಾ.

ಕಾಲರಾಯನ ಗಾಲಿ ಕತ್ತಲ್ಲೆ ತಿರುಗಲಿ
ನನ್ನೆದೆಗೆ ನಿನ್ನೊಲವ
ದೀಪ ಹಚ್ಚಾ.

ದೇಹದ ಗೂಡಲಿ ನಿನ್ನೊಲವು ಮೂಡಲಿ
ಜಗವೆಲ್ಲ ನೋಡಲಿ
ದೀಪ ಹಚ್ಚಾ.

ಬಾನಿನಂಗಳದಲ್ಲಿ ಚುಕ್ಕಿ ಹೊಳೆದೆಸೆವಂತೆ
ನನ್ನ ಮನದಂಗಳದಿ
ದೀಪ ಹಚ್ಚಾ.

ಬೆಲ್ಲದಂತೆಲ್ಲ ಬಗೆ ಕರಗುತಲಿಹುದೊಳಗೆ
ನಿನ್ನನೆ ಬೇಡುವೆ
ದೀಪ ಹಚ್ಚಾ.

ದೀಪಿಲ್ಲ ಧೂಪಿಲ್ಲ ಝುಳಝುಳವಿನಿಸಿಲ್ಲ
ಕಳಕಳವಾಯ್ತೆಲ್ಲ
ದೀಪ ಹಚ್ಚಾ.

ಮಿಂಚಿಗೆ ಕಾರ್ಮುಗಿಲು ಮಿರುಗದೆ ಹೊನ್ನಾಗಿ
ನಾನೂ ಹೊನ್ನಾದೇನು
ದೀಪ ಹಚ್ಚಾ.

ಹಳೆಬಾಳು ಸತ್ತಿತ್ತು ಕೊಳೆಬಾಳು ಸುಟ್ಟಿತ್ತು
ಹೊಸಬಾಳು ಹುಟ್ಟಿತ್ತು
ದೀಪ ಹಚ್ಚಾ.

ದಿನದಿನದ ಲೋಕಾನುಭವದೊಳಿದೆಯನು ತುಂಬಿ
ಜೀವನವನನುಗೊಳಿಸಿ
ದೀಪ ಹಚ್ಚಾ.

ಸಾವಿನ ಒಳಸಂಚು ಮಾಯುದ ಕಣ್ಮಿಂಚು
ನಿನ್ನೆದುರು ನಂದಿತು
ದೀಪ ಹಚ್ಚಾ

ಪ್ರೀತಿಯ ರತಿಗೆ ನೀ ಬೆಳಕಿನ ಆರತಿ
ಬೆಳಗಿ ಕಲ್ಲಾರತಿ
ದೀಪ ಹಚ್ಚಾ.

ಮೋಹದ ಮತಿಗೆ ನೀ ಸುಟ್ಟು ತೋರುವ ದೀಪ
ಸುಜ್ಞಾನಪ್ರದೀಪ
ದೀಪ ಹಚ್ಚಾ.

ಜ್ಯೋತಿಸ್ವರೂಪನೆ ಸ್ವಯಂಪ್ರಕಾಶನೆ
ತೇಜೋರೂಪನೆ
ದೀಪ ಹಚ್ಚಾ.

ವಿಶ್ವಮೋಹಿತಚರಣ ವಿವಿಧವಿಶ್ವಾಭರಣ
ಆನಂದದ ಕಿರಣ
ದೀಪ ಹಚ್ಚಾ.

ನೀನೆಂಬ ಜೋತಿಯಲಿ ನಾನೆಂಬ ಪತಂಗ
ಸೋತ ಉಲಿ ಏಳಲಿ
ದೀಪ ಹಚ್ಚಾ,

ಭವದಂಧಕಾರದಿ ಎನ್ನ ಸಂಸಾರದಿ
ನಿಂದೀಪ ಬೆಳಗಲಿ
ದೀಪ ಹಚ್ಚಾ,

ನನ್ನಂತರಂಗದಿ ನಂದದೆ ನಿಂದೀಪ
ನಂದಾದೀಪಾಗಿರಲಿ
ದೀಪ ಹಚ್ಚಾ.

ಉಷಾ ಪ್ರೆಸ್, ಮೈಸೂರು - 1

ಈ ಲೇಖಕರ ಕೃತಿಗಳು

ರಾಗಿಣಿ
ಗಗನ ಚುಕ್ಕಿ
ಅಂಚೆಯ ಪೆಟ್ಟಿಗೆ
ಇಂದ್ರ ಚಾಪ
ಪಾಚಯ್ಯ
ಜಹನಾರ
ಭರ್ತೃಹರಿಯ ಶತಕತ್ರಯ
ಗಾಥಾಸಪ್ತಶತಿ
ಅಮರು ಶತಕ
ಗೀತಗೋವಿಂದ
ಬುದ್ಧ ಚರಿತೆ
ಕೆಲವು ಇಂಗ್ಲಿಷ್ ಪ್ರಬಂಧಗಳು
ಕನ್ನಡ ಕಾಳಿದಾಸ ಮಹಾ ಸಂಪುಟ
ಅಕ್ಕ ಮಹಾದೇವಿ
ಭಾವಗೀತೆ
ಸೀಳುನೋಟ
ಶ್ರೀರಾಮಪಟ್ಟಾಭಿಷೇಕಂ
ಅದ್ಭುತರಾಮಾಯಣಂ
ಭೂಮಿ ಮತ್ತು ಧೂಮಕೇತು

ನಮ್ಮ ಪ್ರಕಟನೆಗಳು

ಭರ್ತೃಹರಿಯ ಶತಕತ್ರಯ	—ಶ್ರೀ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.	೧-೨೫
ಗೀತ ಗೋವಿಂದ	—ಶ್ರೀ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.	೧-೫೦
ಕನ್ನಡ ಕಾಳಿದಾಸ ಮಹಾಸಂಪುಟ	—ಶ್ರೀ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.	೧೫-೦೦
ವಡ್ಡಾರಾಧನೆಯ ಕತೆಗಳು	—ಶ್ರೀ ಕೆ. ನಾಗೇಂದ್ರಪ್ಪ, ಎಂ.ಎ.	೪-೦೦
ಕುಮಾರ ಜೈಮಿನಿ	—ಪಂಡಿತ ಕೆ. ನರಸಿಂಹಶಾಸ್ತ್ರೀ	೧-೦೦
ಪುರಸೊತ್ತಿನ ಹವ್ಯಾಸಗಳು	—ಶ್ರೀ ಎ. ಕೃಷ್ಣಮೂರ್ತಿ, ಬಿ.ಎ., ಬಿ.ಟಿ.	೧-೨೫
ನಂಜುಂಡ ಕವಿ	—ಶ್ರೀ ದೇ. ಜವರೇಗೌಡ, ಎಂ.ಎ.	೪-೦೦
ಭೂಮಿ ಮತ್ತು ಧೂಮಕೇತು	—ಶ್ರೀ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.	೦-೫೦
ರಾಗಿಣಿ	,,	೧-೮೦
ಗಗನ ಚುಕ್ಕಿ	,,	೧-೮೦
ಹೃದಯ ಸಂವಾದ	—'ಸುಜನಾ'	ಅಚ್ಚಿನಲ್ಲಿ
ಸಾಹಿತ್ಯ ಮಾರ್ಗ	—ಶ್ರೀ ದೇ. ಜವರೇಗೌಡ, ಎಂ.ಎ.	,,
ಬದ್ಧಪ್ರಮೀತ್ಯೂಸ್	—ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರೀ, ಎಂ.ಎ.	,,

ಸರಸ ಸಾಹಿತ್ಯ ಪ್ರಕಾಶನ, ರಾಮ ಅಯ್ಯರ್ ರಸ್ತೆ, ಮೈಸೂರು - ೪